## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ

ಸಿಸಿ.382/2015

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಗೋವಿಂದಮ್ಮ | ಸಿಡಬ್ಲೂಃ **13** |
| ತಂದೆ/ಗಂಡನ ಹೆಸರು | ಃ | ಕೃಷ್ಣಪ್ಪ | ಪಿಡಬ್ಲೂಃ **05** |
| ವಯಸ್ಸು | ಃ | 60 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಕೂಲಿ ಕೆಲಸ | 14.11.2025 |
| ವಾಸ ಸ್ಥಳ | ಃ | ಚೀಮಂಗಲ | |

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ಸುಮಾರು **10** ವರ್ಷಗಳ ಹಿಂದೆ ಆಟೋ ರಿಕ್ಷಾದಲ್ಲಿ ಹೊಸಹುಡ್ಯ ಗ್ರಾಮದ ಶನಿಮಹಾತ್ಮ ದೇವಸ್ಥಾನಕ್ಕೆ ಹೋಗಿ ವಾಪಸ್ಸು ನಾನು, ಚಾ.ಸಾ.**1** ಮತ್ತು ಚಾ.ಸಾ.**1** ರವರ ಮಗಳು ಹಂಡಿಗನಾಳದ ಕಟ್ಟೆಯ ಮೇಲೆ ಬರುತ್ತಿದ್ದಾಗ ಒಂದು ಆಟೋ ರೀಕ್ಷಾ ಅತೀವೇಗವಾಗಿ ಬಂದು ನಮ್ಮ ಆಟೋ ರಿಕ್ಷಾಗೆ ಡಿಕ್ಕಿ ಪಡಿಸಿತ್ತು. ಡಿಕ್ಕಿ ಪಡಿಸಿದ ಪರಿಣಾಮ ನನಗೆ ಪ್ರಜ್ಞೆ ಇರಲಿಲ್ಲ. ನನ್ನ ಮೊಮ್ಮಗಳು ಸ್ಥಳದಲ್ಲಿಯೇ ಮೃತ ಪಟ್ಟಳು. ನನ್ನ ತಲೆಯ ಎಡ ಭಾಗಕ್ಕೆ ಗಾಯವಾಗಿರುತ್ತದೆ. ಪೋಲೀಸರು ವಿಚಾರಣೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

(ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ಭಾಗಶಃ ವ್ಯತಿರಿಕ್ತ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸಅ.ರವರು ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಬೇಕೆಂದು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>

ದಿನಾಂಕಃ**09.08.2014** ರಂದು ಮದ್ಯಾಹ್ನ **12.45** ಗಂಟೆ ಸಮಯದಲ್ಲಿ ಅಪಘಾತ ಸಂಭವಿಸಿತ್ತು ಎಂದರೆ ಸರಿ. ನಾವು ಪ್ರಯಾಣ ಮಾಡುತ್ತಿದ್ದ  ಆಟೋ ಸಂಕೆಎ**-43-2473** ಎಂದರೆ ಸರಿ. ಸದರಿ ಆಟೋ ಹಂಡಿಗನಾಳ ಕೆರೆ ಕಟ್ಟೆಯ ರಸ್ತೆಯಲ್ಲಿ ಆರೋಪಿಯ  ಅತೀವೇಗ ಮತ್ತು ಅಜಾರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಕಡೆ ಇದ್ದ ಗಾರ್ಡ್ ಕಲ್ಲಿಗೆ ಡಿಕ್ಕಿ ಪಡಿಸಿತ್ತು ಎಂದರೆ ಸರಿ. ಕಲ್ಲಿಗೆ ಡಿಕ್ಕಿ  ಪಡಿಸಿದ ಪರಿಣಾಮ ಆಟೋಗೆ ಕರೆಗೆ ಬಿದ್ದಿತ್ತು ಎಂದರೆ ಸರಿ. ಆಗ ನಮ್ಮೊಂದಿಗೆ ಪ್ರಯಾಣ ಮಾಡುತ್ತಿದ್ದ ಚಸಾ.**11, 12, 14** ರಿಂದ **19** ರವರಿಗೆ ಗಾಯಗಳಾಗಿತ್ತು ಎಂದರೆ ಸರಿ. ಸದರಿ ಅಪಘಾತಕ್ಕೆ ಆರೋಪಿಯ ನಿರ್ಲಕ್ಷ್ಯದ ಚಾಲನೆ ಕಾರಣವಾಗಿರುತ್ತದೆಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಜಿ ಬಿ ವಕೀಲರಿಂದ.

ನಾವು ಅಪಘಾತವಾಯಿತು ಎಂದು ಹೇಳುವ ದಿನ ಬೆಳಿಗ್ಗೆ **10** ಗಂಟೆಗೆ ಮನೆ ಬಿಟ್ಟೆವು. ಆ ದಿನ ಬಸ್‌ನಲ್ಲಿ ಶಿಡ್ಲಘಟ್ಟ ತಲುಪಿದಾಗ **12** ಗಂಟೆ ಆಗಿತ್ತು. ಶಿಡ್ಲಘಟ್ಟ ಇಂದ ಶನಿ ಮಹಾತ್ಮ ದೇವಸ್ಥಾನ ತಲುಪಿದಾಗ **1** ಗಂಟೆ ಆಗಿತ್ತು. ದೇವಸ್ಥಾನದಲ್ಲಿ ದೇವರ ದರ್ಶನವನ್ನು **04** ಗಂಟೆ ಅಷ್ಟರಲ್ಲಿ ಮುಗಿಯಿತು. ಆಟೋದಲ್ಲಿ ಆ ದಿನ ಎಷ್ಟು ಜನ ಹತ್ತಿದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ನನ್ನ ಮಗ ಮತ್ತು ಆರೋಪಿಯ ನಡುವೆ ಗಲಾಟೆ ಆಗಿತ್ತು ಎಂದರೆ ಸರಿ. ನನಗೂ ಮತ್ತು ಆರೋಪಿಯ ನಡುವೆ ವಿಶ್ವಾಸ ಇರುವುದಿಲ್ಲ ಎಂದರೆ ಸರಿ. ಆರೋಪಿ ಮತ್ತು ನಮ್ಮ ನಡುವೆ ವಿಶ್ವಾಸ ಇಲ್ಲದೇ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮಧ್ಯಾಹ್ನ **03.00** ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.